ಮಾಡಿದ್ದೇವೆ. Land transfer ಆದ ತಕ್ಷಣ ಮಾಡುತ್ತೇವೆ. ನಾನು Chief Architect ಗೆ ಹೇಳಿರುತ್ತೇನೆ. ಅದಕ್ಕೆ design ಕೂಡ prepare ಮಾಡುತ್ತಿದ್ದಾರೆ. ಅದನ್ನು ಮಾಡಿದ ತಕ್ಷಣ ಅದಕ್ಕೆ immediate ಆಗಿ ಟೆಂಡರ್ ಕರೆಯುವಂಥ ಪ್ರಕ್ರಿಯೆಯನ್ನು ಪ್ರಾರಂಭ ಮಾಡತ್ತೇವೆ.

ಡಾ॥ ರಫೀಕ್ ಅಹಮದ್.ಎಸ್: ಮಾನ್ಯ ಅಧ್ಯಕ್ಷರೆ, Medical Council of India ದವರು February March inspection ಗೆ ಬರುತ್ತಾರೆ, ಅಷ್ಟರೊಳಗೆ ಕಟ್ಟಡ ಇಲ್ಲದಿದ್ದರೆ ಅವರು ಮಾನ್ಯತೆ ಕೊಡುವುದಿಲ್ಲ. ಈ ವರ್ಷ ನಾವು 6 ಮೆಡಿಕಲ್ ಕಾಲೇಜುಗಳನ್ನು ಕಳೆದುಕೊಂಡಿದ್ದೇವೆ. ಸುಮಾರು 900 ಸೀಟುಗಳನ್ನು ನಾವು ಕಳೆದುಕೊಂಡಿದ್ದೇವೆ.

ಅಧ್ಯಕ್ಷರು: Medical Collage ಕಟ್ಟಡ ಕಟ್ಟುವುದು ಎಂದರೆ ಮಾಯಾಬಜಾರ್ ಮಾಡುವುದು ಏನ್ರಿ! Land ಈಗ ಬಂದಿದೆ ಅಂತೆ, ಕೆಲಸ ಶುರು ಮಾಡುತ್ತಾರೆ. ಆಯಿತು, ಬಿಡಿ ಸಾಕು.

ಡಾ॥ ರಫೀಕ್ ಅಹಮದ್.ಎಸ್: ಫೆಬ್ರವರಿಯಲ್ಲಿ ಅನೌನ್ಸ್ ಮಾಡಿದ್ದಾರೆ ಇನ್ನೂ ಕೆಲಸ ಶುರು ಮಾಡಿಲ್ಲ.

ಅಧ್ಯಕ್ಷರು: ಯಾರಾದರೂ ಜಾದುಗೀದು ಮಾಡುತ್ತಾರೆ ನೋಡಿ ಹಾಕಿ.

ಡಾ॥ ರಫೀಕ್ ಅಹಮದ್.ಎಸ್: ಮಾನ್ಯ ಅಧ್ಯಕ್ಷರೆ, ಸ್ವಲ್ಪ ಬೇಗ ಶುರು ಮಾಡುವುದಕ್ಕೆ ಹೇಳಿ.

ಡಾ॥ ಶರಣ ಪ್ರಕಾಶ್ ಆರ್.ಪಾಟೀಲ್: 8 ತಿಂಗಳು ಒಂದು ವರ್ಷದಲ್ಲಿ ಯಾವುದೇ Medical Collage ಕಟ್ಟುವುದಕ್ಕಾಗುವುದಿಲ್ಲ. ಅದಕ್ಕೆ minimum ಆಗಿ ಎರಡು ವರ್ಷ ಬೇಕಾಗುತ್ತದೆ. ಆದಷ್ಟು ಬೇಗ ಮಾಡುತ್ತೇವೆ.

ಅಧ್ಯಕ್ಷರು: ಪಕ್ಕದಲ್ಲಿ ಒಂದು ಮೆಡಿಕಲ್ ಕಾಲೇಜು ಇದೆ. ಅದನ್ನು ಖಾಲಿ ಮಾಡಿ ಅದರಲ್ಲಿ ನಿಮ್ಮದು ನಡೆಸಿ, ಮಾನ್ಯ ಸುರೇಶ್‌ಗೌಡ.ಬಿ. ಕೇಳಿ.

9. ವಿಷಯ:– ತುಮಕೂರು ಕೆರೆಯಿಂದ ನೀರು ಒದಗಿಸುವ ಕುರಿತು.

ಶ್ರೀ ಬಿ. ಸುರೇಶ್‌ಗೌಡ (ತುಮಕೂರು):– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ತುಮಕೂರು ತಾಲ್ಲೂಕಿನ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬುಗುಡನಹಳ್ಳಿ ಕೆರೆಯಿಂದ ಮೈದಾಳ ಕೆರೆಗೆ ನೀರೊದಗಿಸಿ, ಸಂಗ್ರಹಣಾ ಕೆರೆಯನ್ನಾಗಿಸಿ, ಮೈದಾಳ ಕೆರೆಯ ಮುಖಾಂತರ ಹರೇಹಳ್ಳಿ ಹಾಗೂ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಕ್ಕೆ ನೀರೊದಗಿಸುವ ಯೋಜನೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದಿರುವುದು ಹಾಗೂ ವಿಳಂಬವಾಗಿರುತ್ತದೆ. ನನಗೆ ಉತ್ತರ ಬಂದಿದೆ, ಆ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, 23–4–2012 ರಲ್ಲಿ ಟೆಂಡರ್ ಪೂರ್ಣಗೊಂಡಿದೆ. ಕೆಲಸ ನಡೆಯುತ್ತಿದೆ. 2012 ರಿಂದ 2014 ಇಲ್ಲಿಯವರೆಗೆ 35 ಕಿ.ಮೀ.ಪೈಪ್‌ಲೈನ್ ಹಾಕಬೇಕಾಗಿತ್ತು. 5 ಕಿ.ಮೀ.ಹಾಕಿದ್ದಾರೆ. ಜಾಕ್‌ವೆಲ್ ಎಲ್ಲಾ ಸ್ಟಾಪ್ ಆಗಿದೆ. ಇನ್ನೊಂದು ಉತ್ತರವನ್ನು ಕೊಟ್ಟಿದ್ದಾರೆ. ರಾಷ್ಟ್ರೀಯ ಹೆದ್ದಾರಿ 4 ನ್ನು 6 ಪಥ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯನ್ನು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕೈಗೊಂಡಿರುವ ಪ್ರಯುಕ್ತ ರಾಷ್ಟ್ರೀಯ ಹೆದ್ದಾರಿ–4ರ ರೈಟ್ ಆಫ್ ವೇ ಯಲ್ಲಿ ಈ ಯೋಜನೆಗಾಗಿ ಪೈಪ್‌ಲೈನ್‌ನ್ನು ಅಳವಡಿಸಲು ಅನುಮತಿ ನೀಡಿರುವುದಿಲ್ಲ. ರೈಲ್ವೆ ಕ್ರಾಸಿಂಗ್ ಮೂಲಕ ಪೈಪ್‌ಲೈನ್ ಹಾದು ಹೋಗಲು ಸೌತ್–ವೆಸ್ಟ್ ರೈಲ್ವೆಯವರ ಅನುಮತಿಯನ್ನು ಪಡೆಯಲು ವಿಳಂಬವಾಗುತ್ತಿದೆ ಎಂದು ಇವರು ಕತೆಗಳನ್ನು ಹೇಳಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಗಳು ಹಾಗೂ ತುಮಕೂರು ಜಿಲ್ಲೆಯ ಹಿರೇಹಳ್ಳಿ ಕೈಗಾರಿಕಾ ಪ್ರದೇಶಕ್ಕೆ 15 ಎಮ್.ಎಲ್.ಡಿ ನೀರನ್ನು ಬುಗುಡನಹಳ್ಳಿ ಕೆರೆಯಿಂದ ದೇವರಾಯಪಟ್ಟಣದ ಕೆರೆಯ ಮೂಲಕ ಮೈದಾಳ ಕೆರೆಯಲ್ಲಿ ಸಂಗ್ರಹಿಸಿ ಈ ಕೈಗಾರಿಕಾ ಪ್ರದೇಶಗಳಿಗೆ ಪೂರೈಸಲು ಯೋಜಿಸಲಾಗಿರುತ್ತದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ` 75.38 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಂಡಿರುವ ಈ ಯೋಜನೆಯು, ಹಿರೇಹಳ್ಳಿ ಹಾಗೂ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶಗಳಿಗೆ

ನೀರೊದಗಿಸುವ ಯೋಜನೆಯಾಗಿರುತ್ತದೆ. ಇದು ಕುಡಿಯುವ ನೀರಿನ ಯೋಜನೆಯಾಗಿರುವುದಿಲ್ಲ. ಕಾಮಗಾರಿಯ ಗುತ್ತಿಗೆಯನ್ನು ಮೆ: ಐ.ವಿ.ಆರ್.ಸಿ.ಎಲ್. ಲಿಮಿಟೆಡ್ ರವರಿಗೆ ವಹಿಸಲಾಗಿದ್ದು, ಕಾರ್ಯಾದೇಶವನ್ನು ದಿನಾಂಕ: 23–04–2012ರಂದು ನೀಡುವುದರೊಂದಿಗೆ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. ಈ ಯೋಜನೆಯನ್ನು ದಿನಾಂಕ: 23–04–2012ರಂದು ಕೈಗೆತ್ತಿಕೊಳ್ಳಲಾಗಿರುತ್ತದೆ. ಈ ಯೋಜನೆಗಾಗಿ ಒಟ್ಟು 35.50 ಕಿ.ಮೀ. ಉದ್ದದ ಪೈಪ್‌ಲೈನ್ ಅಳವಡಿಸಬೇಕಿದ್ದು, ಈವರೆವಿಗೆ 5.14 ಕಿ.ಮೀ. ಅಳವಡಿಸಲಾಗಿರುತ್ತದೆ. ಬುಗುಡನಹಳ್ಳಿ, ಮೈದಾಳ ಕೆರೆಯ ಭಾಗದಲ್ಲಿ ಪಂಪ್‌ಹೌಸ್ ಜ್ಯಾಕ್‌ವೆಲ್ ಮತ್ತು ಇತರೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ರಾಷ್ಟ್ರೀಯ ಹೆದ್ದಾರಿ 4ನ್ನು 6 ಪಥ ರಸ್ತೆಯನ್ನಾಗಿ ಪರಿವರ್ತಿಸುವ ಯೋಜನೆಯನ್ನು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕೈಗೊಂಡಿರುವ ಪ್ರಯುಕ್ತ ರಾಷ್ಟ್ರೀಯ ಹೆದ್ದಾರಿ–4ರ ರೈಟ್ ಆಫ್ ವೇ ಯಲ್ಲಿ ಈ ಯೋಜನೆಗಾಗಿ ಪೈಪ್‌ಲೈನ್‌ನ್ನು ಅಳವಡಿಸಲು ಅನುಮತಿ ನೀಡಿರುವುದಿಲ್ಲ. ರೈಲ್ವೆ ಕ್ರಾಸಿಂಗ್‌ಗಳ ಮೂಲಕ ಪೈಪ್‌ಲೈನ್ ಹಾದು ಹೋಗಲು ಸೌತ್–ವೆಸ್ಟ್ ರೈಲ್ವೆಯವರ ಅನುಮತಿಯನ್ನು ಪಡೆಯಲು ವಿಳಂಬವಾಗುತ್ತಿದೆ. ಈ ಕಾರಣಗಳಿಂದಾಗಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಈ ಯೋಜನೆಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು: ಇವರ ಕತೆಬೇಡವಂತೆ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಬಿ.ಸುರೇಶ್‌ಗೌಡ: ನನಗೆ ಗೊತ್ತಿರುವ ತರಹ ತುಮಕೂರಿನಲ್ಲಿರುವ ಯಾರೋ ಒಬ್ಬರು ಶಾಸಕರು ತಡೆಯೊಡ್ಡಿದ್ದಾರೆಂದು ಹೋರಾಟಗಳು ಆಗುತ್ತಿದೆ. ನೀರಿನ ಆಲೋಕೇಶನ್ ಆಗಿದೆ. ರಫೀಕ್ ಅವರೆ ಒಂದು ನಿಮಿಷ. ಟೆಂಡರ್ ಕರೆದಿದ್ದಾರೆ, ಹಣ ಬಿಡುಗಡೆ ಮಾಡಿದ್ದಾರೆ water Allocation ಆಗಿದೆ. ಎರಡು ವರ್ಷದಿಂದ ಏಕೆ ಕೆಲಸ ಮಾಡುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: Allocation ಆಗಿದೆ, ಎರಡು ವರ್ಷದಿಂದ ಕಾಮಗಾರಿ ನಡೆಯುತ್ತಿದೆ.

ಶ್ರೀ ಬಿ.ಸುರೇಶ್‌ಗೌಡ: ನಡೆಯುತ್ತಿಲ್ಲ, ಕೆಲಸ ಸ್ಥಗಿತವಾಗಿದೆ.

ಶ್ರೀ ಟಿ.ಬಿ. ಜಯಚಂದ್ರ: ಅದಕ್ಕೆ ಕಾರಣವೇನೆಂದರೆ, ರೈಲ್ವೆ ಕ್ರಾಸಿಂಗ್‌ದು ಒಂದು. National Highway permission ಸಿಕ್ಕಿಲ್ಲದಿರುವುದು ಒಂದು ಮುಖ್ಯ ಕಾರಣವಾಗುತ್ತದೆ. ನನಗೂ ಕೂಡ ಇದರ ಅರಿವು ಇರತಕ್ಕಂಥದು. ಆದಷ್ಟು ಬೇಗ ಈ ಎರಡಕ್ಕೂ permission ತೆಗೆದುಕೊಳ್ಳುವುದಕ್ಕೆ ಎಲ್ಲಾ ರೀತಿಯಾದ ಕ್ರಮ ಕೈಗೊಂಡಿದ್ದೇವೆ.

ಶ್ರೀ ಬಿ. ಸುರೇಶ್‌ಗೌಡ: ಆ ರೀಚ್ ಬಿಟ್ಟು ಮುಂದೆ ಕೆಲಸ ಮಾಡುವುದಕ್ಕೆ ಕಂಟ್ರಾಕ್ಟರ್‌ಗೆ ಏನು ಕಷ್ಟ ಇದೆ? ಕೆಲಸ ಆಗಬೇಕು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನೀರು ಕೊಡಬೇಕೋ ಅಥವಾ ಬರಿ ಕಾಮಗಾರಿ ಮುಗಿಯಬೇಕೋ? ಹಾಗದರೆ permission ತೆಗೆದುಕೊಳ್ಳುವುದಕ್ಕೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಸುರೇಶ್‌ಗೌಡ: ನಾನೂ ಬರುತ್ತೇನೆ ಸರ್, ಕೇಂದ್ರ ಸರ್ಕಾರ ನಮ್ಮದೇ ಇದೆ. ರೈಲ್ವೆದು ಮತ್ತು ನ್ಯಾಶನಲ್ ಹೈವೆ ದು ನನಗೇ ಕೊಡಿ, ನಾನೇ ಮಾಡಿಸಿಕೊಂಡು ಬರುತ್ತೇನೆ. ನಿಮ್ಮ ಅಧಿಕಾರಿಗಳು ಏನೂ ಪ್ರಯತ್ನ ಮಾಡದೆ purpose ಆಗಿ ನಿಲ್ಲಿಸಿ ಬಿಟ್ಟಿದ್ದಾರೆ. ನನ್ನದು multy village ಇದೆ. ಎರಡು ವರ್ಷದಿಂದ 5 ಕೋಟಿ ರೂ.ಗಳನ್ನು ಖರ್ಚು ಮಾಡಿ multy village commission ಆಗಿಲ್ಲ. ಸುಮಾರು 25 ಹಳ್ಳಿಗಳಿಗೆ ಕುಡಿಯುವ ನೀರನ್ನು ಕೊಡಬೇಕು. ಎಲ್ಲಾ ಫ್ಲೋರೈಡ್ ನೀರು, ಅದು ಮತ್ತು Industial are ದಲ್ಲಿ mixed ಆಗಿ ಕುಡಿಯುವುದಕ್ಕೇ ಆಗುತ್ತಿಲ್ಲ. 1000, 1500 ಅಡಿವರೆಗೆ ಬೋರ್‌ವೆಲ್ ಹಾಕಿದರೂ ಕುಡಿಯುವುದಕ್ಕೆ ನೀರು ಇಲ್ಲ. ಮೈದಾಳ ಕೆರೆಯಿಂದ ಸುಮಾರು ಹಳ್ಳಿಗಳಿಗೆ ನೀರು ಕೊಡಬೇಕು. ನೀರು ಹಿರೇಹಳ್ಳಿಗೆ ಕೊಡಬೇಡಿ Industrial area ಗೆ ಕೊಡಬೇಡಿ. ನನ್ನ objection ಇಲ್ಲ. ಆದರೆ ಆ ಭಾಗದಲ್ಲಿರುವ ತುಮಕೂರು ತಾಲ್ಲೂಕಿನ ಸಿದ್ದಗಂಗಾ ಮಠದ 8000 ಮಕ್ಕಳಿಗೆ ಆ ಕೆರೆಯಿಂದ ನೀರು ಕೊಡುತ್ತಿದ್ದೆವು. ಹರೇಹಳ್ಳಿ ಗ್ರಾಮ ಪಂಚಾಯತಿಗೆ ನೀರು ಕೊಡುತ್ತಿದ್ದೆವು. ತುಮಕೂರು ನಗರಕ್ಕೆ ನೀರು

ಕೊಡುತ್ತಿದ್ದೆವು. ತುಮಕೂರು ನಗರಕ್ಕೆ ನೀರು ಕೊಡುವುದಾದರೂ ಮಾಡಿ. ಆಮೇಲೆ ಹಿರೇಹಳ್ಳಿಗೆ ಕೊಡಬೇಕಾ ಅಥವಾ ದಾಬಸ್‌ಪೇಟೆಗೆ ಕೊಡಬೇಕಾ ಎನ್ನುವುದನ್ನು ನಿರ್ಧಾರ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಈ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಯಾರ ವಿರೋಧವೂ ಇಲ್ಲ. ತುಮಕೂರು ಶಾಸಕರು ವಿರೋಧ ಮಾಡಿಲ್ಲ.

ಶ್ರೀ ಬಿ. ಸುರೇಶ್‌ಗೌಡ: ನೀವು ಭರವಸೆಯನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ: ಈ ರೈಲ್ವೆದು ಮತ್ತು ನ್ಯಾಶನಲ್ ಹೈವೆದು ಈ ಎರಡು ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಆಧ್ಯತೆಯ ಮೇಲೆ ಕ್ರಮವನ್ನು ತೆಗೆದುಕೊಳ್ಳೋಣ. ನನಗೂ ಕೂಡ ಗೊತ್ತಿರುವಂಥ ವಿಚಾರ.

ಶ್ರೀ ಬಿ. ಸುರೇಶ್‌ಗೌಡ: Tender ಅನ್ನು extension ಮಾಡಬೇಡಿ. ಎರಡು ವರ್ಷವಾದರೂ ಕೆಲಸವನನು ಕಂಪ್ಲೀಟ್ ಮಾಡಿಲ್ಲವೆಂದರೆ, ಸರ್ಕಾರದಿಂದ ಎಷ್ಟು ಹಣ ಖರ್ಚಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: Clearance ಬರದಿದ್ದರೆ ಕಾಮಗಾರಿ ಮಾಡತಕ್ಕಂಥದ್ದು ಕಷ್ಟವಾಗುತ್ತದೆ. ಅದಕ್ಕೆ ಆಧ್ಯತೆ ಕೊಡೋಣ.

ಶ್ರೀ ಬಿ. ಸುರೇಶ್‌ಗೌಡ: ಇದನ್ನು ಯಾವಾಗ ಮುಗಿಸುತ್ತೀರಿ ಹೇಳಿ? ಎರಡು ವರ್ಷವಾಯಿತು, ಅವನ ಟೆಂಡರ್ ಇರುವುದು ಒಂದೂವರೆ ವರ್ಷ.

ಶ್ರೀ ಟಿ.ಬಿ. ಜಯಚಂದ್ರ: ರೈಲ್ವೆದು ಮತ್ತು National Highway ದು ಈ ಎರಡು Government of India ಗೆ ಹೋಗಿ permission ಬರಬೇಕಾಗುತ್ತದೆ.

ಶ್ರೀ ಬಿ. ಸುರೇಶ್‌ಗೌಡ: ಅದು ಬಿಟ್ಟು ಮುಂದು ಮಾಡಿಸಿ ಸರ್.

ಶ್ರೀ ಟಿ.ಬಿ. ಜಯಚಂದ್ರ: ಅದು ಕೂಡ ಅಷ್ಟೇ important.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ: State ನಲ್ಲಿ ಕೆಲಸವನ್ನು stop ಮಾಡಿಸಿರುತ್ತೀರಿ. ಕೆಲಸ ಏಕೆ ನಿಲ್ಲಿಸಿದ್ದೀರಿ ಅದನ್ನು ಹೇಳಿ ಸರ್. Total work ಅನ್ನು stop ಮಾಡಿದ್ದೀರಿ. 1% ಕೆಲಸ ಆಗುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಆದಷ್ಟು ಬೇಗ ಪೂರ್ಣಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳೋಣ.

ಶ್ರೀ ಬಿ. ಸುರೇಶ್‌ಗೌಡ: ಆ ಕೆಲಸವನ್ನು ಪ್ರಾರಂಭ ಮಾಡಿಸಿ.

ಡಾ॥ ರಫೀಕ್ ಅಹಮದ್ ಎಸ್: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಬುಗುಡನಹಳ್ಳಿ ಕೆರೆ ಇರುವುದು ತುಮಕೂರು ನಗರಕ್ಕೆ ಕುಡಿಯುವ ನೀರಿಗೋಸ್ಕರ್ ದಾಬಾಸ್‌ಪೇಟೆ ಮತ್ತು Industrial purpose ಗೆ ಕೊಡುವುದಿಲ್ಲವೆಂದು ನಗರಪಾಲಿಕೆಯಲ್ಲಿ ಒಂದು resolution ಮಾಡಿದ್ದೇವೆ. ಹಾಗಾಗಿ ಆ ಕೆರೆ ಇರುವುದು ಕುಡಿಯುವ ನೀರಿಗೋಸ್ಕರ್. ಪಕ್ಕದಲ್ಲಿ ಒಂದು ಕುಪ್ಪುರ ಕೆರೆ ಇದೆ, ಅಲ್ಲಿಂದ ಬೇಕಾದರೆ ದಾಬಾಸ್‌ಪೇಟೆಯ Industial area ಕ್ಕೆ ತೆಗೆದುಕೊಂಡು ಹೋಗಲಿ ನಮ್ಮದೇನು ಅಭ್ಯಂತರವಿಲ್ಲ. ಬುಗುಡನಹಳ್ಳಿ ಕೆರೆಯಿಂದ ನಮಗೆ ಕೊಡುತ್ತಿರುವುದರಲ್ಲೇ ಕಡಿಮೆ ನೀರು ಕೊಡುತ್ತಿದ್ದಾರೆ. ನಮಗೆ 1.35 ಟಿ.ಎಂ.ಸಿ. ನೀರು ಕೊಡಬೇಕು. 75 ಟಿ.ಎಂ.ಸಿ ನೀರು ಕೊಡುತ್ತಿದ್ದಾರೆ. ಹಾಗಾಗಿ ನಮಗೆ ನೀರು shortage ಬೀಳುತ್ತಿದೆ. ಹಾಗಾಗಿ ದಾಬಾಸ್‌ಪೇಟೆ ಅಥವಾ ಹರೇಹಳ್ಳಿಗೆ ನೀರು ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಇಬ್ಬರು ಸದಸ್ಯರು ಇಲ್ಲಿ ಬನ್ನಿ. ಯಾರು ಸೋಲುತ್ತಾರೆ ನೋಡೋಣ.

ಶ್ರೀ ಬಿ. ಸುರೇಶ್‌ಗೌಡ: ಯಾರೋ ಒಬ್ಬರು ನಿರ್ಧಾರ ಮಾಡುವುದು ಅಲ್ಲ ಸರ್. 75 ಕೋಟಿ ರೂ.ಗಳಿಗೆ ಟೆಂಡರ್ ಕರೆದು ಬಿಟ್ಟು ನೀರು ಕೊಡಬೇಡಿ, ನೀರು ಬಿಡಬೇಡಿ. ಎಂದರೆ?

ಡಾ॥ ರಫೀಕ್ ಅಹಮದ್ ಎಸ್: ಪಕ್ಕದಲ್ಲಿ ಕುಪ್ಪುರ ಕೆರೆ ಇದೆ ಅಲ್ಲಿಂದ ತೆಗೆದುಕೊಳ್ಳಲಿ.

(ಗೊಂದಲ)

ಶ್ರೀ ಬಿ. ಸುರೇಶ್‌ಗೌಡ: ಎರಡೂ ಕೆರೆ ಇರುವುದು ನನ್ನ ವಿಧಾನಸಭಾ ಕ್ಷೇತ್ರದಲ್ಲಿ. ತುಮಕೂರು ನಗರಕ್ಕೆ ನೀರು ಬಿಡುವುದಿಲ್ಲವೆಂದರೆ ಕಾನೂನು ಆಗುತ್ತದಾ? ನಾವು ಎಲ್ಲವನ್ನೂ ಕೊಟ್ಟಿದ್ದೇವೆ. ನನ್ನ ಕ್ಷೇತ್ರದ ಕೆರೆಯಿಂದ ನಾವು ನೀರು ತೆಗೆದುಕೊಂಡಿಲ್ಲ, ಇಡೀ ತುಮಕೂರು ನಗರಕ್ಕೇ ಕೊಟ್ಟಿದೆ. ಬೇಗ ಸರ್ಕಾರ ಕೆಲಸ ಮುಗಿಸಲಿ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಇದ್ದಾರೆ.

ಅಧ್ಯಕ್ಷರು: ಜಿಲ್ಲಾಮಂತ್ರಿಗಳು ನನಗೆ ಗೊತ್ತಿದೆ ಎಂದು ಹೇಳಿದ್ದಾರೆ. ಬಗೆಹರಿಸುತ್ತೇನೆಂದು ಅವರೇ ಹೇಳಿದ್ದಾರೆ.

ಶ್ರೀ ಬಿ. ಸುರೇಶ್‌ಗೌಡ: ಕೆಲಸ ಪ್ರಾರಂಭಿಸಿ ಎಂದು ನನ್ನ ಮನವಿ ಅಷ್ಟೆ.

ಶ್ರೀ ಟಿ.ಬಿ. ಜಯಚಂದ್ರ: ರೈಲ್ವೆದು ಮತ್ತು National Highway ದು ಎರಡಕ್ಕೂ permission ಸಿಕ್ಕಿಲ್ಲ, ಅದರ ಜೊತೆಯಲ್ಲಿ simultaneous ಆಗಿ, ಬುಗುಡನಹಳ್ಳಿ ಕೆರೆಯಿಂದ ಅಲ್ಲದಿದ್ದರೂ ಇನ್ನೊಂದು ಕೆರೆಯಿಂದ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಬಿ. ಸುರೇಶ್‌ಗೌಡ: ಜಾಕ್‌ವೆಲ್ ಮಾಡಿ, ಎಲ್ಲಾ ಪ್ರಾಜೆಕ್ಟ್ ಅಪ್ರೂವಲ್ ಮಾಡಿ ಬೇರೆ ಕೆರೆಯಿಂದ ನೀರು ತರುತ್ತೇವೆಂದರೆ ಯಾವ ನ್ಯಾಯ ಸರ್? ಸಾಧ್ಯವೆ ಸರ್? ನಮಗೆ ಅಪ್ರೂವಲ್ ಸರ್ಕಾರ ಕೊಟ್ಟಿರುವುದು ಬುಗುಡನಹಳ್ಳಿ ಕೆರೆಯಿಂದ ಮೈದಾಳ ಕೆರೆಗೆ ಲಿಫ್ಟ್ ಮಾಡುವುದಕ್ಕೆ.

ಅಧ್ಯಕ್ಷರು: ಮಾನ್ಯ ಸಚಿವರು ಬಗೆಹರಿಸುತ್ತಾರೆ ಬಿಡಿ. ಈಗ ಸದನವನ್ನು ನಾಳೆ ಬೆಳಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ರಾತ್ರಿ 8 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 15–7–2014 ರ ಬೆಳಗ್ಗೆ: 10.00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)